**ಕರ್ನಾಟಕ ವಿಧಾನಸಭೆ**
**ಹದಿನಾಲ್ಕನೇ ವಿಧಾನಸಭೆ**
**ಹನ್ನೆರಡನೇ ಅಧಿವೇಶನ**

# ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ, 2016

**(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ–38)**

ಕರ್ನಾಟಕ ಅಬಕಾರಿ ಅಧಿನಿಯಮ, 1965ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಅಬಕಾರಿ ಅಧಿನಿಯಮ, 1965ನ್ನು (1966ರ ಕರ್ನಾಟಕ ಅಧಿನಿಯಮ 21) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಕರ್ನಾಟಕ ಅಬಕಾರಿ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **2ನೇ ಪ್ರಕರಣದ ತಿದ್ದುಪಡಿ.**– ಕರ್ನಾಟಕ ಅಬಕಾರಿ ಅಧಿನಿಯಮ, 1965ರ (1966ರ ಕರ್ನಾಟಕ ಅಧಿನಿಯಮ 21) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,–

(i) (27)ನೇ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(27) "ಹೆಂಡ" ಎಂದರೆ, ಅಬಕಾರಿ ಮರದಿಂದ ತೆಗೆಯಲಾದ, ಆದರೆ ನೀರಾವನ್ನು ಒಳಗೊಳ್ಳದಿರುವ ಹುಳಿಹಿಡಿದ (fermented) ರಸ."

(ii) (27)ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(27ಎ) "ನೀರಾ" ಎಂದರೆ, ತೆಂಗಿನ ಮರದಿಂದ ತೆಗೆಯಲಾದ ಮತ್ತು ಯಾವುದೇ ವಿಧಾನದಲ್ಲಿ ಪಾತ್ರೆಗಳಲ್ಲಿ ಸಂಗ್ರಹಿಸಿರುವ ಹಾಗೂ ಹುಳಿಹಿಡಿಯದಿರುವ ಪಾರದರ್ಶಕ, ಪಾಕಯುತವಾದ, ವಾಸನೆ ಮತ್ತು ರುಚಿಯಲ್ಲಿ ಸಿಹಿಯಾಗಿರುವ, ತನ್ನ ಮೇಲ್ಪದರದಲ್ಲಿ ತೆಳು ನೊರೆಯನ್ನೂ ಹೊಂದದಿರುವ ಮತ್ತು ಯಾವುದೇ ಆಮ್ಲದೊಂದಿಗೆ ಸಂರಕ್ಷಿಸದೇ ಇರುವ ರಸ."

**3. 13ಎ ಹೊಸ ಪ್ರಕರಣದ ಸೇರ್ಪಡೆ.**– ಮೂಲ ಅಧಿನಿಯಮದ 13ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**13ಎ. ಲೈಸೆನ್ಸನ್ನು ಪಡೆಯದ ಹೊರತು ನೀರಾ ಮತ್ತು ನೀರಾ ಉತ್ಪನ್ನಗಳ ಉತ್ಪಾದನೆ ಇತ್ಯಾದಿಯ ನಿಷೇಧ.**– ನಿಯಮಿಸಬಹುದಾದ ಅಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಹಾಗೂ ಸಕ್ಷಮ ಪ್ರಾಧಿಕಾರಿಯ ಮೂಲಕ ಮಂಜೂರಾದ ಲೈಸನ್ಸನ್ನು ಪಡೆಯದ ಹೊರತು ಅಥವಾ ಅಂಥ ಫೀಜನ್ನು ಪಾವತಿಸದ ಹೊರತು, ಯಾವೊಬ್ಬ ವ್ಯಕ್ತಿಯು ತೆಂಗಿನ ಮರದಿಂದ ನೀರಾವನ್ನು ಇಳಿಸತಕ್ಕದ್ದಲ್ಲ ಅಥವಾ ಸಂಸ್ಕರಿಸತಕ್ಕದ್ದಲ್ಲ."

**4. 32ನೇ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 32ನೇ ಪ್ರಕರಣದ (3)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(4) 13ಎ ಪ್ರಕರಣದ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸುವವನು ಅಪರಾಧ ನಿರ್ಣೀತವಾದ ಮೇಲೆ ಮೊದಲ ಐದು ಅಪರಾಧಗಳವರೆಗೆ ಪ್ರತಿ ಸಲವೂ ಐದು ಸಾವಿರ ರೂಪಾಯಿಗಳ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು. ತರುವಾಯದ ಅಪರಾಧದ ಸಂದರ್ಭದಲ್ಲಿ, ಆತನು ಆರು ತಿಂಗಳ ಅವಧಿಯ ಕಾರವಾಸದೊಂದಿಗೆ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸನ್ಮಾನ್ಯ ಮುಖ್ಯಮಂತ್ರಿಯವರು 2015-16ರ ಆಯವ್ಯಯ ಭಾಷಣದಲ್ಲಿ, ತೆಂಗಿನ ಮರಗಳಿಂದ ಮಿತ ಪ್ರಮಾಣದಲ್ಲಿ "ನೀರಾ"ವನ್ನು ತೆಗೆಯಲು ತೆಂಗು ಬೆಳೆಗಾರರ ಸಂಯುಕ್ತ ಸಂಘದ ಸದಸ್ಯರಿಗೆ ಅನುಮತಿ ನೀಡಲು ಮತ್ತು ಅದರಿಂದಾಗಿ ತೆಂಗು ಬೆಳೆಗಾರರ ಆದಾಯದಲ್ಲಿ ಪ್ರಮುಖ ಹೆಚ್ಚಳವನ್ನು ತರಲು, ಅಬಕಾರಿ ಅಧಿನಿಯಮಕ್ಕೆ ತಿದ್ದುಪಡಿಯನ್ನು ಪ್ರಸ್ತಾವಿಸಿದ್ದರು. ಕೇರಳ, ತಮಿಳುನಾಡು, ಮಹಾರಾಷ್ಟ್ರ, ಗೋವಾ ಇಂಥ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ಲಕ್ಷದ್ವೀಪ ಮತ್ತು ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ನೀರಾ ಉತ್ಪಾದನೆಯನ್ನು ಕಾನೂನಾತ್ಮಕವಾಗಿ ಅನುಮತಿಸಲಾಗಿದೆ.

ಆದ್ದದರಿಂದ, ಕರ್ನಾಟಕ ಅಬಕಾರಿ ಅಧಿನಿಯಮ, 1965ನ್ನು ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು, ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ:-

(i) "ಹೆಂಡ" ಪರಿಭಾಷೆಯಿಂದ "ಹುಳಿ ಹಿಡಿಯದ ರಸ" ಪದವನ್ನು ತೆಗೆದು ಹಾಕುವುದು ಮತ್ತು "ನೀರಾ"ವನ್ನು "ಹೆಂಡ"ದಿಂದ ಪ್ರತ್ಯೇಕಿಸುವುದು;

(ii) "ನೀರಾ" ಪದವನ್ನು ಪರಿಭಾಷಿಸುವುದು;

(iii) ನೀರಾ ತೆಗೆಯುವುದನ್ನು ಮತ್ತು ನೀರಾ ಉತ್ಪನ್ನಗಳನ್ನು ತಯಾರಿಸುವುದನ್ನು ನಿಯಂತ್ರಿಸುವುದು; ಮತ್ತು

(iv) 13ಎ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳ ಉಲ್ಲಂಘನೆಗೆ ದಂಡನೆಯನ್ನು ಕಲ್ಪಿಸುವುದು.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತ ಜ್ಞಾಪನ ಪತ್ರ

| | |
|---|---|
| **ಖಂಡ 3** | 3ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾದ 13ಎ ಉಪಪ್ರಕರಣವು, ತೆಂಗಿನ ಮರದಿಂದ ನೀರಾವನ್ನು ಇಳಿಸಲು ಲೈಸೆನ್ಸ್ ನೀಡಲು ಫೀಜನ್ನು ನಿಗದಿಗೊಳಿಸಲು ಮತ್ತು ನಿಬಂಧನೆಗಳು ಹಾಗೂ ಷರತ್ತುಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಹೆಚ್. ವೈ ಮೇಟಿ**
ಅಬಕಾರಿ ಮಂತ್ರಿಗಳು.

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನಸಭೆ.

## ಅನುಬಂಧ

## ಕರ್ನಾಟಕ ಅಬಕಾರಿ ಅಧಿನಿಯಮ 1965ರ

## (1966ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ಉದ್ಧೃತ ಭಾಗ

**Xxx xxx xxx**

**2. ಪರಿಭಾಷೆಗಳು:** Xxx xxx xxx

(27) **"ಹೆಂಡ"** ಎಂದರೆ ಅಬ್ಕಾರಿ ಮರದಿಂದ ತೆಗೆಯಲಾದ ಹುಳಿ ಹಿಡಿದ ಅಥವಾ ಹಿಡಿಯದ ರಸ.

Xxx xxx xxx

ಸರ್ಕಾರಿ ಮುದ್ರಣಾಲಯ, ಸುವರ್ಣ ಸೌಧ ಘಟಕ, ಬೆಳಗಾವಿ, ಪಿ7, ಕಾಸೂ , 1000–ಪ್ರತಿಗಳು 28ನೇ ನವೆಂಬರ್, 2016

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**TWELFTH SESSION**

# THE KARNATAKA EXCISE (AMENDMENT) BILL, 2016

**(L.A. Bill No. 38 of 2016)**

A Bill further to amend the Karnataka Excise Act, 1965.

Whereas it is expedient further to amend the Karnataka Excise Act, 1965 (Karnataka Act 21 of 1966) for the purposes hereinafter appearing;

Be it enacted by the Karnataka State Legislature in the sixty-seventh year of the Republic of India, as follows.-

**1. Short title and commencement.-** (1) This Act may be called the Karnataka Excise (Amendment) Act, 2016.

(2) It shall come into force at once.

**2. Amendment of section 2.-** In the Karnataka Excise Act, 1965 (Karnataka Act 21 of 1966) (hereinafter referred to as the principal Act), in section 2,-

(i) for clause (27), the following shall be substituted, namely:-

"(27) "Toddy" means fermented juice drawn from an excise tree but does not include Neera."

(ii) after clause (27), the following shall be inserted, namely:-

"(27-A) "Neera" means the juice drawn from a coconut tree and collected in receptacles in any manner and not subjected to fermentation, which is transparent, syrupy, sweet in smell and taste, without the slightest foam on its surface and preserved without any acid."

**3. Insertion of new section 13-A.-** After section 13 of the principal Act, the following shall be inserted, namely:-

**"13A. Manufacture etc., of Neera and Neera Products prohibited except under a licence.-** No person shall tap Neera from coconut tree or further process it, except with a licence granted by the competent authority or payment of such fee and subject to such terms and conditions as may be prescribed.

**4. Amendment of section 32.-** In section 32 of the principal Act, after sub-section (3), the following shall be inserted, namely:-

"(4) Whoever violates the provisions of section 13A or the rules made thereunder shall on conviction be punished with a fine of rupees five thousand for each time, upto first five offences. In case of subsequent offence, he shall be punished with an imprisonment for a term of six months or with fine which may extend to ten thousand rupees or with both."

## STATEMENT OF OBJECTS AND REASONS

In the Budget Speech 2015-16, the Hon'ble Chief Minister, proposed to bring amendment to the Excise Act to permit members of Coconut Growers Federation to harvest 'Neera' in limited quantities from the coconut trees and thereby increasing the income of the coconut growers significantly. Further, Neera production is legally permitted in the States like Kerala, Tamil Nadu, Maharashtra, Goa and Union Territories of Lakshadweep and Andaman and Nicobar Islands.

Therefore, it is considered necessary to amend the Karnataka Excise Act, 1965 to,-

(i) remove the term "unfermented juice" from the definition of "Toddy" and to distinguish "Neera" from "Toddy";

(ii) define the term "Neera";

(iii) regulate tapping of Neera and manufacture of Neera products; and

(iv) provide punishment for violation of provisions of section 13A and the rules made thereunder.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

## MEMORANDUM REGARDING DELEGATED LEGISLATION

**Clause 3:** Section 13A proposed to be inserted by clause 3, empowers the State Government to make rules regarding determination of fee and terms and conditions of licence to tap Neera from coconut tree.

The proposed delegation of legislative power is normal in character.

**H.Y.METI**
Minister for Excise

**S.Murthy**
Secretary (I/C)
Karnataka Legislative Assembly.

## ANNEXURE

## EXTRACT FROM THE KARNATAKA EXCISE ACT,1965

## (KARNATAKA ACT 21 OF 1966)

**XX XX XX**

**2. Definitions. - XX XX XX**

(27) " toddy" means fermented or unfermented juice drawn from an excise tree ;

**XX XX XX**

Government Press, Suvarna Soudha Unit, Belgavi, 28th November 2016 P7, W.D., Copies 1000